ಸಾಕ್ಷಿಯನ್ನು ದಿಃ 29-01-2020 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ವಾದಿಗಳ ಪರ - ಶ್ರೀ ಎಸ್ ಜೆ ವಕೀಲರಿಂದಃ

2 ನೇ ಪ್ರತಿವಾದಿ ಹಾಗೂ ಪಾತಲಿಂಗನ್ ರವರ ವಂಶಕ್ಕೆ ನಾನು ಸಂಬಂಧಿಸಿದವನಲ್ಲ ಎಂದರೆ ಸಾಕ್ಷಿ ನನ್ನ ತಂದೆ ಹಾಗೂ ಅವರ ತಂದೆ ಅಣ್ಣತಮ್ಮಂದಿರು ಎಂದು ಉತ್ತರಿಸುತ್ತಾರೆ. 2 ಮತ್ತು 3 ನೇ ಪ್ರತಿವಾದಿಯ ತಂದೆಯರಿಗೆ ನಿಮ್ಮ ತಂದೆ ಹೇಗೆ ಸಂಬಂಧ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತನ್ನ ತಂದೆ ಚಿಕ್ಕಣನ ಮಗ ಎಂದು ಉತ್ತರಿಸುತ್ತಾರೆ. ಮೃತ 4 ನೇ ಪ್ರತಿವಾದಿಯ ಮಗಳನ್ನು ನೀವು ಮದುವೆಯಾಗಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಅವರ ತಮ್ಮನ ಮಗಳನ್ನು ಮದುವೆಯಾಗಿದ್ದೇನೆ ಎಂದು ಉತ್ತರಿಸುತ್ತಾರೆ.

ನಾನು 1962-63 ರಲ್ಲಿ ಜನಿಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 43 ಎಂದು ಬರೆಸಿದ್ದೇನೆ ಎಂದರೆ ಸಾಕ್ಷಿ ತಾನು ಬರೆಸಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ 1979 ರಲ್ಲಿ ನನಗೆ ಸುಮಾರು 15-16 ವರ್ಷ ವಯಸ್ಸಾಗಿತ್ತು. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದಂತೆ ನನಗೆ 43 ವರ್ಷ ವಾಗಿದ್ದರೆ 1979 ರಲ್ಲಿ ನಿಮಗೆ 7-9 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ ಅದರಲ್ಲಿ ಬರೆದಿರುವ ವಯಸ್ಸಿನ ಬಗ್ಗೆ ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ದಿಃ02.07.1979 ರ 2 ಕರಾರು ಪತ್ರಗಳ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತಾನು ತನ್ನ ತಂದೆ ತಾಯಿಯ ಜೊತೆ ಹೋಗಿದ್ದೆ, ಆದ್ದರಿಂದ ಮಾಹಿತಿ ಇದೆ ಎಂದು ಉತ್ತರಿಸುತ್ತಾರೆ. ಆ ದಿನ ದೊಡ್ಡಪಾತಪ್ಪ, ಪಾರ್ತಲಿಂಗನ್ ಹಾಗೂ ಕುಂಟಪ್ಪ ಒಟ್ಟಿಗೆ ಹೋಗಿದ್ದರು. ಆ ದಿನ ಮೂರು ಕರಾರು ಪತ್ರಗಳನ್ನು ಒಟ್ಟಿಗೆ ಬರವಣಿಗೆ ಮಾಡಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ . ಆ ದಾಖಲೆಗಳಿಗೆ ನನ್ನ ತಂದೆ ಸಾಕ್ಷಿದಾರರಾಗಿ ಸಹಿ ಮಾಡಿಲ್ಲ. ಆ ದಿನ ಆ ಕರಾರು ಪತ್ರಗಳಿಗೆ ಯಾರು ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ

ಎನ್ನುವುದು ನನಗೆ ಗೊತ್ತಿಲ್ಲ. ಆ ದಿನ ಗೋವಿಂದಪ್ಪ, ಮಹಲಿಂಗಪ್ಪ, ಇನ್ನೊಬ್ಬ ಮಹಲಿಂಗಪ್ಪ , ಬಿ ಟಿ ರಂಗಸ್ವಾಮಿ ರವರು ಬಂದಿದ್ದರು. ಅಷ್ಟು ಜನರಲ್ಲಿ ಗೋವಿಂದಪ್ಪ ಹಾಗೂ ಬಿ ಟಿ ರಂಗಸ್ವಾಮಿ ಆ ಕರಾರು ಪತ್ರಗಳಿಗೆ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಆ ಕರಾರು ಪತ್ರಗಳನ್ನು ಯಾರು ಬರೆದಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಆ ಕರಾರು ಪತ್ರಗಳಿಗೆ ಶಂಭುಲಿಂಗಪ್ಪ, ಶಿವಣ್ಣ, ಪಾರ್ತಯ್ಯ ಸಹಿ ಮಾಡಿದ್ದಾರೆ. ಆ ಮೂರು ಕರಾರು ಪತ್ರಗಳಿಗೆ ಆ ಮೂವರು ಸಹಿ ಮಾಡಿದ್ದಾರೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಬ್ಬೊಬ್ಬರು ಒಂದೊಂದಕ್ಕೆ ಸಹಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ದೊಡ್ಡಪಾತಪ್ಪನವರಿಗೆ ಬರೆದುಕೊಟ್ಟ ಕರಾರು ಪತ್ರಕ್ಕೆ ಶಿವಣ್ಣ ಸಹಿ ಮಾಡಿದ್ದಾರೆ ಪಾರ್ತಲಿಂಗನ್ ರವರಿಗೆ ಬರೆದುಕೊಟ್ಟ ಕರಾರು ಪತ್ರಕ್ಕೆ ಶಂಭುಲಿಂಗಪ್ಪ ಸಹಿ ಮಾಡಿದ್ದಾರೆ ಕುಂಟಯ್ಯನಿಗೆ ಬರೆದು ಕೊಟ್ಟ ಕರಾರು ಪತ್ರಕ್ಕೆ ಶಂಭುಲಿಂಗಪ್ಪ, ಶಿವಣ್ಣ ಹಾಗೂ ಪಾರ್ತಯ್ಯ ಸಹಿ ಮಾಡಿದ್ದಾರೆ.

ದಾವಾ ಸರ್ವೆ ನಂ.63/3 ರ ಒಟ್ಟು ವಿಸ್ತೀರ್ಣ 4 ಎಕರೆ 24 ಗುಂಟೆ. ಪಾರ್ತಲಿಂಗಪ್ಪ, ಶಂಭುಲಿಂಗಪ್ಪ, ಚಿಕ್ಕಣ್ಣ ಮತ್ತು ಶಿವಣ್ಣ ಒಟ್ಟು ಕುಟುಬಂದಲ್ಲಿ ವಾಸವಾಗಿದ್ದರಾ ಎಂದರೆ ಸಾಕ್ಷಿ ಪಾರ್ತಲಿಂಗಪ್ಪ ಹಾಗೂ ಚಿಕ್ಕಣ್ಣ ವಿಭಾಗವಾಗಿದ್ದರು ಎಂದು ಉತ್ತರಿಸುತ್ತಾರೆ. ಪಾರ್ತಲಿಂಗಪ್ಪ ಹಾಗೂ ಚಿಕ್ಕಣ್ಣ ಅಣ್ಣತಮ್ಮಂದಿರು ಎಂದರೆ ಸರಿ. ಶಂಭುಲಿಂಗಪ್ಪ ಹಾಗೂ ಶಿವಣ್ಣ, ಚಿಕ್ಕಣ್ಣನ ಮಕ್ಕಳು ಎಂದರೆ ಸರಿ. ಪಾರ್ತಲಿಂಗಪ್ಪ ಹಾಗೂ ಚಿಕ್ಕಣ ವಿಭಾಗ ಮಾಡಿಕೊಂಡಿದ್ದರು ಎಂದು ಹೇಳಲು ನಾನು ದಾಖಲೆಯನ್ನು ನೋಡಿಲ್ಲ.

ಸರ್ವೆ ನಂ.63/3 ರ ಉತ್ತರ ದಿಕ್ಕಿನ 2 ಎಕರೆ 13 ಗುಂಟೆ ಜಮೀನು ಪಾರ್ತಲಿಂಗಪ್ಪನ ಪಾಲಿಗೆ ಹೋಗಿತ್ತು. ಚಿಕ್ಕಣನ ಪಾಲಿಗೆ ಆ ಸರ್ವೆ ನಂಬರಿನಲ್ಲಿ 2 ಎಕರೆ 12 ಗುಂಟೆ ಜಮೀನು ಬಂದಿತ್ತು. ಅವರು ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ.

ನೀವು ಹೇಳುವ ಮೂರು ಕರಾರು ಪತ್ರಗಳಾಗುವ ಸಮಯದಲ್ಲಿ ಪಾರ್ತಲಿಂಗಪ್ಪ, ಚಿಕ್ಕಣ್ಣ, ಶಂಭುಲಿಂಗಪ್ಪ ಹಾಗೂ ಶಿವಣ್ಣ ವಿಭಾಗ ಮಾಡಿಕೊಂಡಿದ್ದರೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಜಮೀನನ್ನು ವಿಭಾಗ ಮಾಡಿಕೊಂಡಿದ್ದರು ಎಂದು ಉತ್ತರಿಸುತ್ತಾರೆ.

ಕುಂಟಪ್ಪನಿಗೆ ಪಾರ್ತಲಿಂಗಪ್ಪ 15 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಕರಾರು ಪತ್ರವನ್ನು ಜುಲೈ 1979 ರಲ್ಲಿ ಬರೆದುಕೊಟ್ಟಿದ್ದಾನೆ. ಆ ಕರಾರು ಪತ್ರದಲ್ಲಿ ಉಲ್ಲೇಖಿಸಿದ ಜಮೀನಿನ ಪೂರ್ವಕ್ಕೆ ಪಿ ಡಬ್ಲೂ ಡಿ ರಸ್ತೆ. ಪಶ್ಚಿಮಕ್ಕೆ ಸರ್ವೆ ನಂ.63/3 ರ ಉಳಿಕೆ ಜಮೀನು, ದಕ್ಷಿಣಕ್ಕೆ ಚಿಕ್ಕಣ್ಣನ ಜಮೀನು, ಉತ್ತರಕ್ಕೆ ಹುರುಳಿ ಪಾತಪ್ಪನ ಜಮೀನು ಇದೆ ಎಂದು ಉತ್ತರಿಸುತ್ತಾರೆ. ಚಿಕ್ಕಣ್ಣ ಯಾವುದೇ ಕರಾರು ಪತ್ರ ಬರೆದುಕೊಟ್ಟಿಲ್ಲ ಆದರೆ ಆತನ ಮಕ್ಕಳು ಬರೆದುಕೊಟ್ಟಿದ್ದಾರೆ. ಚಿಕ್ಕಣನ ಮಗ ಶಂಭುಲಿಂಗಪ್ಪ ಪಾರ್ತಲಿಂಗನ್ ರವರಿಗೆ ಪೂರ್ವ-ಪಶ್ಚಿಮ 108 ಅಡಿ, ಉತ್ತರ-ದಕ್ಷಿಣ 39 ಅಡಿ ವಿಸ್ತೀರ್ಣದ ಜಾಗಕ್ಕೆ ಕರಾರು ಪತ್ರ ಬರೆದುಕೊಟ್ಟಿದ್ದಾನೆ ಅದು ಎಷ್ಟು ಗುಂಟೆಯಾಗುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಆ ಕರಾರು ಪತ್ರ ಬರೆದುಕೊಡುವ ದಿನ ಶಂಭುಲಿಂಗಪ್ಪನ ಹೆಸರಿನಲ್ಲಿ ಖಾತೆ ಇತ್ತೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಶಿವಣ್ಣ ದೊಡ್ಡಪಾತಣ್ಣನಿಗೆ ಪೂರ್ವ-ಪಶ್ಚಿಮ 90 ಅಡಿ, ಉತ್ತರ-ದಕ್ಷಿಣ 33 ಅಡಿ ವಿಸ್ತೀರ್ಣದ ಜಾಗಕ್ಕೆ ಕರಾರು ಪತ್ರ ಬೆದುಕೊಟ್ಟಿದ್ದಾನೆ. ಆಗ ಶಿವಣ್ಣನ ಹೆಸರಿಗೆ ಖಾತೆ ಇತ್ತೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ದೊಡ್ಡ ಪಾತಣ್ಣನಿಗೆ ಬರೆದುಕೊಟ್ಟ ಜಮೀನಿನ ಪೂರ್ವಕ್ಕೆ ಪಿ ಡಬ್ಲೂ ಡಿ ರಸ್ತೆ, ಪಶ್ಚಿಮಕ್ಕೆ ಸರ್ವೆ ನಂ.63/3 ರ ಉಳಿಕೆ ಜಮೀನು, ಉತ್ತರಕ್ಕೆ ಕುಂಟಪ್ಪನ ಜಮೀನು, ದಕ್ಷಿಣಕ್ಕೆ ಶಂಭುಲಿಂಗಪ್ಪ ಹಾಗೂ ಶಿವಣ್ಣನ ಜಮೀನು ಇದೆ.

ಆ ದಿನ ಕರಾರು ಪತ್ರಗಳು ನೋಂದಣಿಯಾಗಿಲ್ಲ ಆ ಕರಾರು ಪತ್ರಗಳನ್ನು ಬರೆದುಕೊಟ್ಟ ದಿನಾಂಕದಂದು ತುಂಡು ಭೂಮಿ ವರ್ಗಾವಣೆ ನಿಷೇದ ಕಾಯ್ದೆ ಜಾರಿಯಲ್ಲಿ ಇರಲಿಲ್ಲ. ಆ ಕಾಯ್ದೆ

ಯಾವಾಗ ರದ್ದಾಯಿತು ಎನ್ನುವುದು ನನಗೆ ಗೊತ್ತಿಲ್ಲ. ಆ ದಿನ ಕರಾರು ಪತ್ರಗಳನ್ನುನೋಂದಣಿ ಮಾಡಿಸಲು ಯಾವುದೇ ತೊಂದರೆಗಳು ಇರಲಿಲ್ಲ. ಕರಾರು ಪತ್ರ ಬರೆದುಕೊಟ್ಟ 1-2 ವರ್ಷದೊಳಗೆ ಕ್ರಯಪತ್ರ ನೋಂದಾಯಿಸಿಕೊಡಲು ನನ್ನನ್ನು ಕರೆಸಿದ್ದರು ಆಗ ಕ್ರಯ ಪತ್ರ ನೋಂದಾಯಿಸಿ ಕೊಡಲಿಲ್ಲ. ಕ್ರಯ ಪತ್ರ ನೋಂದಣಿ ಮಾಡಿಸಿಕೊಡುವುದಾಗಿ ಅವರು ಹೇಳಿದ್ದರು ಕ್ರಯ ಪತ್ರ ನೋಂದಾಯಿಸಿ ಕೊಡಿ ಎಂದು 20-25 ವರ್ಷಗಳಿಂದ ಕ್ರಯ ಪತ್ರ ಬರೆಸಿಕೊಂಡವರು ಕೇಳಿದ್ದಾರೆ.

ನೀವು ಕರಾರು ಪತ್ರ ಬರೆದುಕೊಟ್ಟಿದ್ದೀರಿ ಅದರಂತೆ ಬಂದು ಕ್ರಯ ಪತ್ರ ನೋಂದಾಯಿಸಿ ಕೊಡಿ ಎಂದು ಈ 25 ವರ್ಷಗಳ ಅವಧಿಯಲ್ಲಿ ಪಾರ್ತಯ್ಯ , ಶಂಭುಲಿಂಗಪ್ಪ ಹಾಗೂ ಶಿವಣ್ಣನಿಗೆ ನೋಟೀಸ್ ಕೊಟ್ಟಿಲ್ಲ. ಈ ವಿಚಾರದ ಬಗ್ಗೆ ಪಂಚಾಯತಿ ನಡೆದಾಗ ಕರಿಯಪ್ಪ ಮಹಲಿಂಗಪ್ಪ ಬಂದಿದ್ದರು. ಇವರನ್ನು ಹೊರತು ಪಡಿಸಿ ಬೇರೆ ಯಾರು ಬಂದಿದ್ದರು ಎನ್ನುವುದನ್ನು ನಾನು ನೋಡಿಲ್ಲ. ನಾನು ಕೇವಲ ಒಂದು ಬಾರಿ ಪಂಚಾಯತಿಗೆ ಹೋಗಿದ್ದೆ. ಆ ಮೊದಲು ಆದ ಪಂಚಾಯತಿಗೆ ನಾನು ಹೋಗಿಲ್ಲ.

ಕರಾರು ಪತ್ರದನ್ವಯ ಕ್ರಯ ಪತ್ರ ನೋಂದಾಯಿಸಿಕೊಡಲು ಪಾರ್ತಯ್ಯ ಶಂಭುಲಿಂಗಪ್ಪ ಹಾಗೂ ಶಿವಣ್ಣ ಬರದಿದ್ದಾಗ ನ್ಯಾಯಾಲಯದಿಂದ ಕ್ರಯ ಪತ್ರ ನೋಂದಾಯಿಸಿಕೊಳ್ಳಲು ಕ್ರಯ ಪತ್ರ ಬರೆಸಿಕೊಂಡವರಿಗೆ ಯಾವುದೇ ತೊದರೆ ಇರಲಿಲ್ಲ ಎಂದರೆ ಸಾಕ್ಷಿ ಅವರು ಯಾವುದೇ ಅಡಚಣೆ ಮಾಡಿಲ್ಲ, ಸ್ವತ್ತಿನ ಸ್ವಾದೀನದಲ್ಲಿ ಕ್ರಯಪತ್ರದಾರರು ಇದ್ದುದ್ದರಿಂದ ನ್ಯಾಯಾಲಯಕ್ಕೆ ಬಂದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸರ್ವೆ ನಂಬರಿನಲ್ಲಿ ದೊಡ್ಡಪಾತಪ್ಪ, ಪಾರ್ತಲಿಂಗನ್, ಚಂದ್ರಶೇಖರ್ ಹಾಗೂ ಕುಂಟಪ್ಪ ಸ್ವಾಧೀನತೆ ಹೊಂದಿದ್ದಾರೆ ಎಂದುತೋರಿಸಲು ಯಾವುದಾದರೂ ದಾಖಲೆ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಾಖಲೆ ಇಲ್ಲ ಎಂದು ಉತ್ತರಿಸುತ್ತಾರೆ.

ದಿಃ02.07.1979 ರಂದು ಕರಾರುಪತ್ರ ಬರೆದುಕೊಡಲು ದಾವಾ ಸರ್ವೆ ನಂಬರ್ ಸ್ವತ್ತಿಗೆ ಸಬಂಧಿಸಿದಂತೆ ಪಾರ್ತಯ್ಯ, ಶಂಭುಲಿಂಗಪ್ಪ ಹಾಗೂ ಶಿವಣ್ಣನಿಗೆ ಪ್ರತ್ಯೇಕ ಖಾತೆ ಇತ್ತೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದೊಡ್ಡಪಾತಪ್ಪನಿಗೆ ಬೀರೇನಹಳ್ಳಿ ಗ್ರಾಮದಲ್ಲಿ ಒಂದು ಮನೆ ಇದೆ ಎಂದರೆ ಸರಿಯಲ್ಲ. ಕರಾರು ಬರೆಸಿಕೊಂಡು ಆ ಜಾಗದಲ್ಲಿ ದೊಡ್ಡಪಾತಪ್ಪ ಮನೆ ಕಟ್ಟಿಸಿದ್ದಾನೆ ಎಂದು ನಾನು ಹೇಳಿದ್ದು, ಆ ರೀತಿ ಮನೆ ಕಟ್ಟಿಸಲು ಆತ ಲೈಸೆನ್ಸ್ ಪಡೆದಿದ್ದಾನೆಯೇ ಎಂದುಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಕಂದಾಯದ ಜಮೀನಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದೊಡ್ಡಪಾತಪ್ಪನವರು ಕಂದಾಯದ ಜಮೀನನ್ನು ವಾಸೋಪಯೋಗಿ ಜಮೀನಾಗಿ ಪರಿವರ್ತಿಸಿಕೊಂಡಿದ್ದಾರೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕಂದಾಯದ ಜಮೀನನ್ನು ಗ್ರಾಮಠಾಣಾಕ್ಕೆ ಸೇರಿಸಿ ಕಂದಾಯ ಸ್ವೀಕರಿಸಲು ಪಂಚಾಯತಿಯಲ್ಲಿ ನಡಾವಳಿ ಆಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಪಂಚಾಯತಿಯಲ್ಲಿ ಆ ರೀತಿ ನಡಾವಳಿ ಆಗಿದೆಯೇ ಎನ್ನುವ ಬಗ್ಗೆ ಈ ದಾವೆ ಹೂಡಿದ ನಂತರ ನಾನು ಪಂಚಾಯತಿಗೆ ಹೋಗಿ ಪರಿಶೀಲನೆ ಮಾಡಿಲ್ಲ.

ದೊಡ್ಡಪಾತಪ್ಪನ ಹೆಸರಿಗೆ ಎಷ್ಟು ವಿಸ್ತೀರ್ಣದ ಜಮೀನಿಗೆ ಪಂಚಾಯತಿಯಲ್ಲಿ ಖಾತೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಕಂದಾಯ ಪಾವತಿಸುವಾಗ ದೊಡ್ಡಪಾತಪ್ಪನ ಹೆಸರಿಗೆ ಎಷ್ಟು ವಿಸ್ತೀರ್ಣದ ಜಮೀನಿಗೆ ಖಾತೆಯಾಗಿದೆ ಎನ್ನುವುದನ್ನು ನಾನು ಪರಿಶೀಲನೆ ಮಾಡಿಲ್ಲ. ಸಾಕ್ಷಿಗೆ ಡಿಡಬ್ಲೂ-1 ರವರ ಮೂಲಕ ಗುರುತಿಸಲ್ಪಟ್ಟಿದ್ದ ನಿಡಿ-2 ರ ದಾಖಲೆಯನ್ನು ತೋರಿಸಿ ಅದರಲ್ಲಿ ಸರ್ವೆ ನಂಬರ್ ನಮೂದು ಇದೆಯೇ ಎಂದುಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲಾ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಡಿಡಬ್ಲೂ-

1 ರ ವರ ಮೂಲಕ ಗುರುತಿಸಲ್ಪಟ್ಟಿದ್ದ ನಿಡಿ-2 ರ ದಾಖಲೆಯಲ್ಲಿ ಸ್ವತ್ತಿನ ಅಳತೆಯನ್ನು , ಚೆಕ್ ಬಂಧಿಯನ್ನು ನಮೂದಿಸಿಲ್ಲ. ಸಾಕ್ಷಿಗೆ ಡಿಡಬ್ಲೂ-1 ರ ವರ ಮೂಲಕ ಗುರುತಿಸಲ್ಪಟ್ಟಿದ್ದ ನಿಡಿ-3 ರ ದಾಖಲೆಯಲ್ಲಿ ಖಾತೆ ನಂಬರ್ ನ್ನು ನಮೂದಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ದೊಡ್ಡಪಾತಪ್ಪನ ಮಗನ ಹೆಸರು ಸೋಮಶೇಖರ್. ಸಾಕ್ಷಿಗೆ ಡಿಡಬ್ಲೂ-1 ರವರ ಮೂಲಕ ಗುರುತಿಸಲ್ಪಟ್ಟಿದ್ದ ನಿಡಿ-3 ರ ಕಂದಾಯ ರಶೀದಿಯಲ್ಲಿ ಸಣ್ಣ ಚಿತ್ತಪ್ಪ ಬಿನ್ ಜಡಿಯಪ್ಪ ನ ಹೆಸರು ಇದೆ.

ನಿಡಿ-4 ರ ಕರಾರು ಪತ್ರದಲ್ಲಿ ಬಿ ಪಿ ಶಿವಣ್ಣ ಎಂದು ಒಬ್ಬನ ಸಹಿ ಮಾತ್ರ ಇದೆ ಎಂದರೆ ಸರಿ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಕರಾರು ಪತ್ರ ಗಳಿಗೆ ಒಬ್ಬೊಬ್ಬರೇ ಸಹಿ ಮಾಡಿ ಕೊಟ್ಟಿಲ್ಲ ಎಂದರೆ ಸರಿ. ದಿಃ02.07.1979 ರಂದು ಶಂಭುಲಿಂಗಪ್ಪ ಹಾಗೂ ಶಿವಣ್ಣ , ದೊಡ್ಡಪಾತಪ್ಪ ಮತ್ತು ಪಾರ್ತಲಿಂಗನ್ ಗೆ ಯಾವುದೇ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ ದಿಃ15.11.1985 ರಂದು ಪಾರ್ತಯ್ಯ ಕುಂಟಪ್ಪನಿಗೆ ಕರಾರು ಪತ್ರ ಬರೆದುಕೊಟ್ಟಿದ್ದಾನೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 1979 ರಲ್ಲಿ ಬರೆದುಕೊಟ್ಟಿದ್ದಾನೆ ಎಂದು ಉತ್ತರಿಸುತ್ತಾರೆ. ದಿಃ15.11.1985 ರ ಕರಾರುಪತ್ರವನ್ನು ಸೃಷ್ಟಿಸಲಾಗಿದೆ, ಅದನ್ನು ಬಿ ಪಿ ಶಿವಣ್ಣ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ದಿಃ02.07.1979 ಮತ್ತು ದಿಃ15.11.1985 ರ ಕರಾರು ಪತ್ರಗಳನ್ವಯ ಸ್ವಾಧೀನತೆ ಬಿಟ್ಟುಕೊಟ್ಟಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದೊಡ್ಡಪಾತಪ್ಪ ದಾವಾ ಸರ್ವೆ ನಂಬರಿನಲ್ಲಿ ಯಾವುದೇ ಮನೆ ಕಟ್ಟಿಲ್ಲ ಎಂದರೆ ಸರಿಯಲ್ಲ. ಅಲ್ಲಿರುವ ಮನೆಯನ್ನು ವಾದಿಗಳು ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಪಂಚಾಯತಿ ದಾಖಲೆಗಳು ದಾವಾ ಸರ್ವೆ ನಂಬರಿನಲ್ಲಿರುವ ಮನೆಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಡಿಡಬ್ಲೂ-1 ರವರ

ಮೂಲಕ ಗುರುತಿಸಲ್ಪಟ್ಟ ನಿಡಿ-2 ರ ದಾಖಲೆ ಗ್ರಾಮಾಠಾಣಾದಲ್ಲಿ ದೊಡ್ಡಪಾತಪ್ಪನವರು ಕಟ್ಟಿಸಿದ ಮನೆಗೆ ಸಂಬಂಧಿಸಿದ ದಾಖಲೆಯಾಗಿದೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರಿನಲ್ಲಿ ವ್ಯವಸಾಯದ ಸಲಕರಣೆಗಳನ್ನು ಇಡಲು ಹಾಗೂ ದವಸದಾನ್ಯಗಳನ್ನು ಶೇಖರಿಸಲು ವಾದಿಗಳು ಶೀಟ್ ಅಳವಡಿಸಿದ ಗೋಡೌನ್ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ಊರಿನಲ್ಲಿ ಇಲ್ಲದೇ ಇರುವಾಗ ದೊಡ್ಡಪಾತಪ್ಪ ಅಕ್ರಮವಾಗಿ ಆ ಮನೆ/ಗೋಡೌನ್ ಒಳಗೆ ಪ್ರವೇಶಿಸಿದ್ದಾನೆ ಎಂದರೆ ಸರಿಯಲ್ಲ. ಈ ಬಗ್ಗೆ ಹಲವಾರು ಬಾರಿ ಪಂಚಾಯತಿ ನಡೆದು ಆ ಮನೆಯನ್ನು ಬಿಟ್ಟು ಕೊಡುತ್ತೇನೆ ಎಂದು ದೊಡ್ಡಪಾತಪ್ಪ ಒಪ್ಪಿಕೊಂಡರೂ ಸಹ ಅದನ್ನು ಆತ ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ಪಾರ್ತಲಿಂಗನ್ ಅಥವಾ ಕುಂಟಪ್ಪ ದಾವಾಸ್ತಿಯ ಸ್ವಾಧೀನತೆಯಲ್ಲಿ ಎಂದೂ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆಯ ವಿಚಾರ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನುಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಡಬ್ಲೂ-1 ರವರ ಮೂಲಕ ಗುರುತಿಸಲ್ಪಟ್ಟ ನಿಡಿ-3 ರ ಕಂದಾಯ ರಶೀದಿ ಬಿ ಪಿ ಶಿವಣ್ಣ ನ ತಾತನ ಸ್ವತ್ತಿಗೆ ಸಂಬಂಧಿದ್ದು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು